## ಅಭಿನಂದನೆಗಳು

ಮಾನ್ಯರೆ/ಆತ್ಮಿಯರೇ,

**COVID-19, Pandemic** ಸನ್ನಿವೇಶದಲ್ಲಿ 2019-20ನೇ ಶೈಕ್ಷಣಿಕ ಸಾಲಿನ ಟರ್ಮಿನಲ್ ಡಿಪ್ಲೋಮಾ ಸೆಮಿಸ್ಟಾರ್ ಪರೀಕ್ಷೆಗಳನ್ನು, 2020ರ ಸೆಪ್ಟೆಂಬರ್ ತಿಂಗಳಿನ ದಿನಾಂಕ:07-09-2020 ರಿಂದ 30-09-2020ರ ತನಕ ನೀವೆಲ್ಲರೂ ಉತ್ತಮವಾಗಿ ನಡೆಸಿ, ಪರೀಕ್ಷೆಗಳನ್ನು ಪೂರ್ಣಗೊಳಿಸಿರುತ್ತೀರಿ.

ಡಿಪ್ಲೋಮಾ ಸೆಮಿಸ್ಟಾರ್ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಮಾರ್ಗದರ್ಶನ ನೀಡಿದ ಶ್ರೀ ಪ್ರದೀಪ್.ಪಿ ಮಾನ್ಯ ಆಯುಕ್ತರು, ಪರೀಕ್ಷೆಯ ಪ್ರತಿ ಹಂತದಲ್ಲಿ ಸ್ಥೈರ್ಯ ತುಂಬಿದ. ಶ್ರೀ ಹೆಚ್.ಯು.ತಳವಾರ್, ಮಾನ್ಯ ನಿರ್ದೇಶಕರು, ಸಹಕರಿಸಿದ ಇಲಾಖೆಯ ಎಲ್ಲಾ ಸ್ತರದ ಅಧಿಕಾರಿಗಳು ಮತ್ತು ಸಿಬ್ಬಂದಿವೃಂದ. ಸುಸೂತ್ರವಾಗಿ ಪರೀಕ್ಷೆಗಳನ್ನು ನಡೆಸಿದ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ಹಾಗೂ ಸಿಬ್ಬಂದಿ ವರ್ಗ. ಪರೀಕ್ಷೆಯನ್ನು ಬರೆದ ಎಲ್ಲಾ ವಿದ್ಯಾರ್ಥಿಗಳು ಮತ್ತು ಬೆಂಬಲಿತ ಪೋಷಕರು. ಪರೀಕ್ಷಾ ಕಾರ್ಯಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಿದ ಸ್ಥಳೀಯ ಆಡಳಿತ, ಖಜಾನೆ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪೋಲೀಸ್ ಇಲಾಖೆಯ ಸಿಬ್ಬಂದಿಗಳು, ಜೊತೆ ಜೊತೆಯಾಗಿ ಕಾರ್ಯನಿರ್ವಹಿಸಿದ ತಾಂತ್ರಿಕ ಪರೀಕ್ಷಾ ಮಂಡಳಿಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ತಮ್ಮೆಲ್ಲರಿಗೂ, ಈ ಮೂಲಕ ತಾಂತ್ರಿಕ ಪರೀಕ್ಷಾ ಮಂಡಳಿಯ ಪರವಾಗಿ ಹಾಗೂ ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

30/09/2020

(ಎನ್.ರವಿಚಂದ್ರನ್)
ಜಂಟಿ ನಿರ್ದೇಶಕರು(ಪರೀಕ್ಷೆ)
ತಾಂತ್ರಿಕ ಪರೀಕ್ಷಾ ಮಂಡಳಿ

---

ಮಾಸ್ಕ್ ಧರಿಸಿ - ಸಾಮಾಜಿಕ ಅಂತರ ಪಾಲಿಸಿ - ಸ್ವಚ್ಛವಾಗಿರಿ

ಮನೋಸ್ಥೈರ್ಯವಿರಲಿ, ಮುಂಬರುವ ಪರಿಸ್ಥಿತಿಯನ್ನು ಎದುರಿಸಲು ಮಾನಸಿಕವಾಗಿ ಸಿದ್ಧವಾಗಿರಿ.

"ಸಂದಿಗ್ಧ ಮತ್ತು ಕಠಿಣ ಸಂದರ್ಭದಲ್ಲಿ ಧನಾತ್ಮಕವಾಗಿ ಚಿಂತಿಸಿ ಸಾಧಕ - ಬಾಧಕಗಳನ್ನು ಎದುರಿಸಲು ಸ್ಥೈರ್ಯವಾಗಿ ಕಾರ್ಯನಿರ್ವಹಿಸುವುದೇ ನಿಜವಾದ ಗಟ್ಟಿತನ"